# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ:07-09-2017ರಂದು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ**

1) ನೇತ್ರಾ ನಾರಾಯಣ್ - ಅಧ್ಯಕ್ಷರು
2) ಸವಿತ ವಿ ಕೃಷ್ಣ - ಸದಸ್ಯರು
3) ಎನ್.ಉಮಾ - ಸದಸ್ಯರು
4) ರಾಧಮ್ಮ ವೆಂಕಟೇಶ್ - ಸದಸ್ಯರು
5) ಜಿ.ಬಾಲಕೃಷ್ಣನ್ - ಸದಸ್ಯರು
6) ವಿ.ಸುರೇಶ್ - ಸದಸ್ಯರು
7) ಹೆಚ್.ಕುಸುಮಾ - ಸದಸ್ಯರು
8) ಎಂ.ಮಾಲತಿ - ಸದಸ್ಯರು
9) ಎಂ.ಶಾಮಲ - ಸದಸ್ಯರು
10) ಕೆ.ವಿ.ರಾಜೇಂದ್ರಕುಮಾರ್ - ಸದಸ್ಯರು
11) ಎಂ.ಗೌತಮ್ ಕುಮಾರ್ - ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಕೌನ್ಸಿಲ್ ಕಾರ್ಯದರ್ಶಿಗಳು
ಮುಖ್ಯ ಲೆಕ್ಕಾಧಿಕಾರಿಗಳು
ಉಪ ನಿಯಂತ್ರಕರು (ಹಣಕಾಸು)

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯದ ಸಂಖ್ಯೆ : ಲೆಪಸ್ಥಾಸ/ವಿ.ಸ/07/17-18**

ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬರುವ ಮುನ್ನ, ಹಿಂದಿನ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡಿದ್ದ ನಿಧಿ ಆಧಾರಿತ ಲೆಕ್ಕಪತ್ರ ಪದ್ಧತಿ-2001 (BMP Accounting regulations-2001) ರಂತೆ ಪಾಲಿಕೆಯ ಹಣಕಾಸು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸಲಾಗುತ್ತಿತ್ತು.

2007 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸುತ್ತಮುತ್ತಲಿನ 7 ಸಿ.ಎಂ.ಸಿ. ಮತ್ತು 1 ಟಿ.ಎಂ.ಸಿ, 110 ಹಳ್ಳಿಗಳನ್ನು ವಿಲೀನಗೊಳಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಗಿ ರಚಿಸಿ ಸರ್ಕಾರ ಆದೇಶ ಹೊರಡಿಸಿರುತ್ತದೆ. ತದನಂತರವೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೂ ಸಹಾ ಹಿಂದಿನ ಲೆಕ್ಕಪತ್ರ ಪದ್ಧತಿ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಅದರ ಆಧಾರದ ಮೇಲೆ ಪಾಲಿಕೆಯ ಹಣಕಾಸು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸಲಾಗುತ್ತಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ ಮತ್ತು ಕಾರ್ಯನಿರ್ವಹಣೆ ಸ್ವರೂಪ ಬದಲಾದ ಹಿನ್ನೆಲೆಯಲ್ಲಿ ಕಾಲಕ್ಕೆ ತಕ್ಕಂತೆ ಹಾಲಿ ನಿರ್ವಹಿಸುತ್ತಿರುವ ಲೆಕ್ಕಪತ್ರ ಪದ್ಧತಿಯೊಂದಿಗೆ ಹೆಚ್ಚುವರಿಯಾಗಿ ಐ.ಎಫ್.ಎಂ.ಎಸ್., ಹೆಚ್.ಆರ್.ಎಂ.ಎಸ್., ಟ್ರೇಡ್ ಲೈಸೆನ್ಸ್ ಮತ್ತು ಇತರೆ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಪಾಲಿಕೆಯ ಹಣಕಾಸು ಮತ್ತು ಲೆಕ್ಕಪತ್ರಗಳನ್ನು ಆನ್‌ಲೈನ್ ವ್ಯವಸ್ಥೆಯಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಲಾಗಿರುತ್ತದೆ.

ಪಾಲಿಕೆಯಲ್ಲಿ ಆರ್ಥಿಕ ಪಾರದರ್ಶಕತೆ ತರುವ ಉದ್ದೇಶದಿಂದ ದಿನಾಂಕ:01-07-2015 ರಿಂದ ಆನ್‌ಲೈನ್ ನಲ್ಲಿ ಐ.ಎಫ್.ಎಂ.ಎಸ್. ಮೂಲಕ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸುವ ವ್ಯವಸ್ಥೆಯು ಜಾರಿ ಮಾಡಿದ ನಂತರ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಫ್.ಬಿ.ಎ.ಎಸ್. ಶಾಖೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದ ಪಾಲಿಕೆಯ ಲೆಕ್ಕಪತ್ರ ನಿರ್ವಹಣೆ, ದ್ವೈಮಾಸಿಕ ಲೆಕ್ಕಪತ್ರ ತಯಾರಿಸಿ, ಕೌನ್ಸಿಲ್ ಸಭೆ ಮುಂದೆ ಮಂಡಿಸುವುದು ಮತ್ತು ಕೆ.ಎಂ.ಸಿ.

Nethra Narayan
ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕಾಯ್ದೆಯಂತೆ ನಿಗದಿತ ಅವಧಿಯಲ್ಲಿ ವಾರ್ಷಿಕ ಲೆಕ್ಕಪತ್ರ ವರದಿಯನ್ನು ತಯಾರಿಸಿ, ಪಾಲಿಕೆ ಸಭೆಯ ಮುಂದೆ ಮಂಡಿಸಿ, ಸರ್ಕಾರದ ಅನುಮೋದನೆ ಪಡೆಯುವ ಪ್ರಕ್ರಿಯೆಯಲ್ಲಿ ಅಡಚಣೆ ಉಂಟಾಗಿ, ತೀವ್ರ ವಿಳಂಬವಾಗುತ್ತಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಂದು ಸರಳ ಮತ್ತು ಸದೃಢ ಲೆಕ್ಕಪತ್ರ ವ್ಯವಸ್ಥೆಯನ್ನು ಅಳವಡಿಸಲು ಅವಶ್ಯಕತೆಯಿರುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳು ವರದಿ ಸಲ್ಲಿಸಿರುವ ಮೇರೆಗೆ, Revised Accounting System ನ್ನು ಜಾರಿಗೆ ತರಲು ದಿನಾಂಕ:20-09-2016ರಂದು ಮೆ.ಬದ್ರಿ ಮಧುಸೂದನ್ & ಶ್ರೀನಿವಾಸನ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು, ರವರಿಗೆ "Preparation of revised accounting manual as per new accounting framework, preparation of roadmap for transition to new accounting structure, prepare process manuals, train accounting personnel in BBMP in implementing the new system, monitoring the same, etc" ರ ಬಗ್ಗೆ ವಿಸ್ತೃತ ವರದಿ ನೀಡಲು ಕಾರ್ಯಾದೇಶ ನೀಡಲಾಗಿರುತ್ತದೆ.

ಸದರಿಯವರು ಪಾಲಿಕೆಯ ಪ್ರಸ್ತುತ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಮತ್ತು ವಿವಿಧ ಕಛೇರಿಗಳಿಗೆ ಭೇಟಿ ನೀಡಿ, ಪಾಲಿಕೆಯ ಪ್ರಸ್ತುತ ಲೆಕ್ಕಪತ್ರ ಪ್ರಮಾಣದ ಆಧಾರದ ಮೇಲೆ ನೂತನ ಪರಿಷ್ಕೃತ ಲೆಕ್ಕಪತ್ರ ಪದ್ಧತಿಯ ಬಗ್ಗೆ ಕರಡು ಪ್ರತಿಯನ್ನು ತಯಾರಿಸಿರುತ್ತಾರೆ.

ಸದರಿಯವರ ಕರಡು ಪ್ರತಿಯನ್ನು ಪರಿಶೀಲಿಸಿ, ಪಾಲಿಕೆಯಲ್ಲಿ ನೂತನ ಲೆಕ್ಕಪತ್ರ ಮತ್ತು ಹಣಕಾಸು ವ್ಯವಸ್ಥೆಯನ್ನು ಅಳವಡಿಸಲು ಮಾನ್ಯ ಆಯುಕ್ತರು ಈ ಕೆಳಕಂಡ ಸಮಿತಿಯನ್ನು ರಚಿಸಿರುತ್ತಾರೆ.

**ಸಮಿತಿಯ ಸದಸ್ಯರು, ಕಾರ್ಯವ್ಯಾಪ್ತಿಯ ವಿವರಗಳು ಕೆಳಕಂಡಂತಿವೆ :**

1. ಶ್ರೀ ಮನೋಜ್ ರಾಜನ್, ವಿಶೇಷ ಆಯುಕ್ತರು (ಹಣಕಾಸು) – ಅಧ್ಯಕ್ಷರು
2. ಶ್ರೀ ಮಹದೇವ, ಮುಖ್ಯ ಲೆಕ್ಕಾಧಿಕಾರಿಗಳು – ಕಾರ್ಯದರ್ಶಿಗಳು
3. ಶ್ರೀಮತಿ ಲಲಿತಾ, ಸ.ನಿ.(ಹ) ಮಹದೇವಪುರ ವಲಯ – ಸದಸ್ಯರು
4. ಶ್ರೀ ಶಶಿಭೂಷಣ್, ಲೆಕ್ಕಪರಿಶೋಧನಾಧಿಕಾರಿ (ಮುಲೆಅ ಕಛೇರಿ) – ಸದಸ್ಯರು
5. ಶ್ರೀ ಮಹಮದ್ ಇಸಾಕ್, ಲೆಕ್ಕ ಅಧೀಕ್ಷಕರು (ಮು.ಲೆ.ಅ. ಕಛೇರಿ) – ಸದಸ್ಯರು
6. ಶ್ರೀ ಜಿ.ಮೂರ್ತಿ, ಲೆಕ್ಕ ಅಧೀಕ್ಷಕರು (ಮು.ಲೆ.ಅ. ಕಛೇರಿ) – ಸದಸ್ಯರು

ಈ ಸಮಿತಿಯು ಕಾಲಕಾಲಕ್ಕೆ ಸಭೆ ನಡೆಸಿ ಮೆ. ಬದ್ರಿ, ಮಧುಸೂದನ್ & ಶ್ರೀನಿವಾಸನ್, ಚಾರ್ಟರ್ಡ್ ಅಕೌಂಟೆಂಟ್ಸ್ ರವರು ತಯಾರಿಸಿರುವ ***ಲೆಕ್ಕ ಪತ್ರ ಪದ್ಧತಿ ಮತ್ತು ಹಣಕಾಸು ವ್ಯವಸ್ಥೆಯನ್ನು ಪರಿಶೀಲಿಸಿರುತ್ತದೆ.***

ಶ್ರೀ ರಾಮಶೇಷನ್ ನಿವೃತ್ತ, ಐ.ಎ.ಎಸ್., ಅಧಿಕಾರಿಯವರು ಈ ವಿಷಯವಾಗಿ ಹಲವಾರು ಬಾರಿ ಕರಡು ಪ್ರತಿಯನ್ನು ವಿಶ್ಲೇಷಿಸಿ ತಮ್ಮ ಅಮೂಲ್ಯವಾದ ಸೂಚನೆ ಮತ್ತು ಸಲಹೆಗಳನ್ನು ನೀಡಿರುತ್ತಾರೆ.

ಹೀಗೆ ವಿವಿಧ ಸಭೆಗಳಲ್ಲಿ ಸದರಿಯವರು ನೀಡಿದ ಸಲಹೆಗಳನ್ನು ಸ್ವೀಕರಿಸಿ, ಮೆ: ಬದ್ರಿ ಮಧುಸೂದನ್ ಮತ್ತು ಶ್ರೀನಿವಾಸನ್ ರವರು ವಿಸ್ತೃತ ವರದಿಯನ್ನು ನೀಡಿರುತ್ತಾರೆ.

**ಈ ವರದಿಯ ಮುಖ್ಯಾಂಶಗಳು ಈ ಕೆಳಕಂಡಂತಿರುತ್ತದೆ.**

**"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಲೆಕ್ಕಪತ್ರ ಮಾರ್ಗಸೂಚಿಗಳು-2017"ರ ಮುಖ್ಯಾಂಶಗಳು:**

1. ಕೇಂದ್ರೀಕೃತ ಲೆಕ್ಕಪತ್ರ ಕೋಶ :

Nethra Narya

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಘಟಕವಾರು ಲೆಕ್ಕಪತ್ರ ನಿರ್ವಹಣೆ ವ್ಯವಸ್ಥೆಯು ಜಾರಿಯಲ್ಲಿದ್ದು, ಸದರಿ ವ್ಯವಸ್ಥೆಯ ಬದಲಾಗಿ ಈ ಹಿಂದೆ ಪಾಲಿಕೆಯಲ್ಲಿ ನಿರ್ವಹಿಸುತ್ತಿದ್ದ ನಿಧಿ ಆಧಾರಿತ ಲೆಕ್ಕಪತ್ರ ಪದ್ಧತಿಯನ್ನು ಪರಿಷ್ಕರಿಸಿ ಲೆಕ್ಕಪತ್ರ ನಿರ್ವಹಣೆಗೆ ಕೇಂದ್ರೀಕೃತ ಲೆಕ್ಕಪತ್ರ ಕೋಶವನ್ನು ಸ್ಥಾಪಿಸಿ, ಪಾಲಿಕೆಯ ಎಲ್ಲಾ ಲೆಕ್ಕಪತ್ರಗಳನ್ನು ಮುಖ್ಯ ಲೆಕ್ಕಾಧಿಕಾರಿಗಳ ಅಧೀನದಲ್ಲಿ ಕೇಂದ್ರೀಕೃತವಾಗಿ ನಿರ್ವಹಿಸುವಂತೆ ರೂಪಿಸಲಾಗಿದೆ.

**2. ಮಾಹಿತಿ ತಂತ್ರಜ್ಞಾನ ವ್ಯವಸ್ಥೆ :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಬಳಸುತ್ತಿರುವ ಇತರೆ ತಂತ್ರಾಂಶಗಳಾದ ಐ.ಎಫ್.ಎಂ.ಎಸ್, ಹೆಚ್.ಆರ್.ಎಂ.ಎಸ್., ಆಸ್ತಿ ತೆರಿಗೆ ಸಂಗ್ರಹಣಾ ಪದ್ಧತಿ, ವ್ಯಾಪಾರ ಪರವಾನಿಗೆ ಶುಲ್ಕ, ಇತ್ಯಾದಿ ಪದ್ಧತಿಗಳಲ್ಲಿ ನಿರ್ವಹಿಸುತ್ತಿರುವ ಆರ್ಥಿಕ ವಹಿವಾಟುಗಳನ್ನು ಟ್ಯಾಲಿ-ಸೇತುವೆ ತಂತ್ರಾಂಶದ ಮೂಲಕ ಒಟ್ಟುಗೂಡಿಸಿ, ಟ್ಯಾಲಿ ತಂತ್ರಾಂಶ ಬಳಸಿ ಲೆಕ್ಕಪತ್ರ ನಿರ್ವಹಣೆ ಮಾಡುವಂತೆ ಪಾಲಿಕೆಯ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲಾಗುತ್ತದೆ.

**3. ಲೆಕ್ಕಪತ್ರ ಪದ್ಧತಿ :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ನಿಧಿ ಆಧಾರಿತ ದ್ವಿನಮೂದನಾ ಲೆಕ್ಕಪದ್ಧತಿಯನ್ನು ಅಳವಡಿಸಿಕೊಂಡು ಅನುಸರಿಸುತ್ತಿದ್ದು, ಸದರಿ ಪದ್ಧತಿಯಡಿಯಲ್ಲಿ ಸಾಂಸ್ಥಿಕ ಮತ್ತು ಸಾಮಾನ್ಯ ನಿಧಿಯಡಿಯಲ್ಲಿ ಲೆಕ್ಕಪತ್ರ ನಿರ್ವಹಣೆಯನ್ನು ವರ್ಗೀಕರಿಸಿ, ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಅದರಂತೆ ದಾಖಲೆ ಮೂಲಕ ನಿರ್ವಹಿಸಲು ನಿಯಮಗಳನ್ನು ರೂಪಿಸಲಾಗಿದೆ.

**4. ಲೆಕ್ಕಪತ್ರ ಚಾರ್ಟ್ ಮತ್ತು ಆರ್ಥಿಕ ಮತ್ತು ಲೆಕ್ಕ ಘಟಕಗಳ ಸಂಕೇತ :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರತಿಯೊಂದು ಆಸ್ತಿಯು ಸೃಜಿಸಲಾಗುವ ಎಲ್ಲಾ ಆರ್ಥಿಕ ವಹಿವಾಟುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು 10 ಸಂಖ್ಯೆಯುಳ್ಳ ಲೆಕ್ಕಪತ್ರ ನಕ್ಷೆಯನ್ನು ಅಳವಡಿಸಿಕೊಳ್ಳುವುದರಿಂದ ಗಣಕೀಕೃತ ಆಧಾರದ ವ್ಯವಸ್ಥೆಯಲ್ಲಿ ಲೆಕ್ಕಪತ್ರ ನಿರ್ವಹಿಸಲು ಮತ್ತು ಮಾಹಿತಿಯನ್ನು ಪಡೆಯಲು ಅನುಕೂಲಕರವಾಗುವುದರಿಂದ ಪಾಲಿಕೆಯ ಎಲ್ಲಾ ಆರ್ಥಿಕ ವಹಿವಾಟುಗಳನ್ನು ವರ್ಗೀಕರಿಸಿ, ಲೆಕ್ಕಪತ್ರ ಚಾರ್ಟ್ ತಯಾರಿಸಲಾಗಿದೆ.

ಆರ್ಥಿಕ ಮತ್ತು ಲೆಕ್ಕಘಟಕಗಳ ಸಂಕೇತವು ಪ್ರತಿಯೊಂದು ಹಣಕಾಸು ಮತ್ತು ಲೆಕ್ಕಪತ್ರ (ಎಫ್‌ಎಯು) ಘಟಕ ಮಟ್ಟದ ವಹಿವಾಟುಗಳನ್ನು ಸುಳಿವು ಹಿಡಿದು ಹುಡುಕಲು ಅನುಕೂಲವಾಗುವಂತೆ ಐದು ವರ್ಣಸಂಖ್ಯಾ ಘಟಕ ವಿಶಿಷ್ಟ ಸಂಕೇತವನ್ನು ಹೊಂದಿರುತ್ತದೆ.

ಈ ಸಂಕೇತೀಕರಣವು ಇಲಾಖೆಯನ್ನು ಸೂಚಿಸುವ ಎರಡು ಸಂಖ್ಯೆಗಳನ್ನು, ವಲಯ ಮತ್ತು ವಿಭಾಗವನ್ನು ಸೂಚಿಸುವ ಒಂದು ಅಕ್ಷರವನ್ನು ಮತ್ತು ಉಪ-ವಿಭಾಗವನ್ನು ಸೂಚಿಸುವ ಒಂದು ಸಂಖ್ಯೆಯನ್ನು ಆಧರಿಸಿರುತ್ತದೆ. ಈ ಲೆಕ್ಕಪತ್ರ ಚಾರ್ಟ್ ಮತ್ತು ಆರ್ಥಿಕ ಮತ್ತು ಲೆಕ್ಕಘಟಕಗಳ ಸಂಕೇತವು ಈ ಮಾರ್ಗಸೂಚಿಯ ಭಾಗವಾಗಿರುತ್ತದೆ.

**5. ಆದಾಯ ಮತ್ತು ವೆಚ್ಚಗಳನ್ನು ಲೆಕ್ಕವಿಡಲು ನಿಯಮಗಳನ್ನು ರೂಪಿಸಿರುವ ಬಗ್ಗೆ :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವೀಕೃತಿಗೆ ಸಂಬಂಧಿಸಿದಂತೆ ಹಾಗೂ ಸ್ವೀಕರಿಸಬಹುದಾದಂತಹ ಆದಾಯ, ಸರ್ಕಾರದ ಅನುದಾನಗಳು, ಆಸ್ತಿ ತೆರಿಗೆ ಸಂಗ್ರಹ, ಬಾಡಿಗೆ ಲೆಕ್ಕ, ಹಕ್ಕುಗಳ ಹರಾಜು, ಕಡತಿಗೊಳಿಸಿ ಶೇಖರಿಸಿದ ತೆರಿಗೆಗಳ ಲೆಕ್ಕ, ತೆರಿಗೆ ಮತ್ತು ತೆರಿಗೆಯೇತರ ಆದಾಯ ಲೆಕ್ಕ, ಆಸ್ತಿ ಮಾರಾಟ ಲೆಕ್ಕ, ಬಡ್ಡಿ ಆದಾಯ ಲೆಕ್ಕ, ಇತರೆ ಸ್ವೀಕೃತಿ ಲೆಕ್ಕಗಳನ್ನು ನಿಗಧಿತ ಅವಧಿಯಲ್ಲಿ ವ್ಯವಸ್ಥಿತವಾಗಿ ಮಾಡಲು ನಿಯಮಗಳನ್ನು ರೂಪಿಸಲಾಗಿರುತ್ತದೆ.

ಪಾಲಿಕೆಯ ಖರ್ಚು-ವೆಚ್ಚಗಳಿಗೆ ಸಂಬಂಧಿಸಿದಂತೆ ವೇತನ ಮತ್ತು ಭತ್ಯೆಗಳ ಲೆಕ್ಕ, ಸೇವಾಂತ ಸೌಲಭ್ಯಗಳು ಮತ್ತು ನಿವೃತ್ತಿ ವೇತನ ಲೆಕ್ಕ, ಇತರೆ ಖರ್ಚು-ವೆಚ್ಚಗಳು, ನಿರ್ವಹಿಸಿದ ಕಾಮಗಾರಿ ಬಿಲ್ಲುಗಳ ಲೆಕ್ಕ, ಆಸ್ತಿ ಸೃಜನಾ, ಹೂಡಿಕೆ,

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಾಲಗಳು, ಸಾಲವನ್ನು ಉಪಚರಿಸುವ ಲೆಕ್ಕ, ಸವಕಳಿ, ಗುತ್ತಿಗೆ ಆಸ್ತಿಗಳು, ಇತ್ಯಾದಿ ಖರ್ಚು-ವೆಚ್ಚಗಳ ಲೆಕ್ಕಗಳನ್ನು ನಿಗದಿತ ಅವಧಿಯಲ್ಲಿ ವ್ಯವಸ್ಥಿತವಾಗಿ ಮಾಡಲು ನಿಯಮಗಳನ್ನು ರೂಪಿಸಲಾಗಿದೆ.

6. ಆರ್ಥಿಕ ತಃಖ್ತೆಗಳು :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವೀಕೃತಿ ಮತ್ತು ಪಾವತಿಗಳಿಗೆ ಸಂಬಂಧಿಸಿದಂತೆ ಮಾಸಿಕ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳನ್ನು ಹಾಗೂ ಕೌನ್ಸಿಲ್ ಸಭೆಗೆ ಮಂಡಿಸಬೇಕಾದ ದ್ವೈಮಾಸಿಕ ಆದಾಯ ಮತ್ತು ವೆಚ್ಚಗಳ ತಃಖ್ತೆಗಳು, ಆಯವ್ಯಯ ತಯಾರಿಸಲು ಅಗತ್ಯ ತಃಖ್ತೆಗಳು ಹಾಗೂ ಆರ್ಥಿಕ ವರ್ಷ ಮುಕ್ತಾಯದ ನಂತರ ಆದಾಯ ಮತ್ತು ಲೆಕ್ಕ ತಃಖ್ತೆಗಳನ್ನು ನಿಗಧಿತ ಅವಧಿಯಲ್ಲಿ ಸಿದ್ದಪಡಿಸಲು ಅನುವಾಗುವಂತೆ ಲೆಕ್ಕಪತ್ರ ನಿರ್ವಹಣೆಯನ್ನು ಮಾಡಲು ವ್ಯವಸ್ಥೆಗೊಳಿಸಲಾಗಿದೆ.

7. ಬ್ಯಾಂಕಿಂಗ್ ವ್ಯವಸ್ಥೆ :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೇಂದ್ರೀಕೃತ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಹಾಲಿ ವಿವಿಧ ಆರ್ಥಿಕ ಮತ್ತು ಲೆಕ್ಕಪತ್ರ ಘಟಕಗಳು ಹೊಂದಿರುವ ಚಾಲ್ತಿ/ಚಾಲ್ತಿಯಲ್ಲಿಲ್ಲದ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಿ/ಹಾಲಿ ಇರುವ ಬ್ಯಾಂಕ್ ಖಾತೆಗಳಲ್ಲಿ, ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಸರಿನಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿಸಿದ ಬ್ಯಾಂಕ್ ಖಾತೆಗಳನ್ನು ಮಾತ್ರ ನಿರ್ವಹಿಸಿ, ಲೆಕ್ಕಸಮನ್ವಯಗೊಳಿಸಲು ಅನುವಾಗುವಂತೆ ನಿಯಮಗಳನ್ನು ರೂಪಿಸಲಾಗಿದೆ.

8. ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಲು ಪೂರ್ವಾಪೇಕ್ಷಿಗಳು :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೂತನ ಲೆಕ್ಕಪತ್ರ ಪದ್ಧತಿಯನ್ನು ಅನುಷ್ಠಾನಗೊಳಿಸಲು ಪ್ರಸ್ತುತ ರೂಢಿಯಲ್ಲಿರುವ ಆಚರಣೆಗಳಿಗೆ ಕೆಲವು ಬದಲಾವಣೆಗಳು ಅಗತ್ಯವಾಗಿರುತ್ತವೆ. ಅದರಂತೆ ಹೆಚ್.ಆರ್.ಎಂ.ಎಸ್.ನಲ್ಲಿ ಪಾಲಿಕೆಯ ಅಧಿಕಾರಿ/ಸಿಬ್ಬಂದಿಯ ವೇತನವನ್ನು ಹೊರತುಪಡಿಸಿ, ಇತರೆ ಪಾವತಿಗಳಿಗೆ ಅವಕಾಶವಿರದಂತೆ ಹಾಗೂ ಪಾಲಿಕೆಯ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಹಾಲಿ ಚಾಲ್ತಿಯಲ್ಲಿರುವ ತಂತ್ರಾಂಶಗಳು ಅಂದರೆ, ಆನ್‌ಲೈನ್ ಆಸ್ತಿ-ತೆರಿಗೆ ಪದ್ಧತಿ, ಆನ್‌ಲೈನ್ ಐ.ಎಫ್.ಎಂ.ಎಸ್. ಮೂಲಕವೇ ನಿರ್ವಹಿಸುವಂತೆ ಅಗತ್ಯ ಬದಲಾವಣೆಗಳನ್ನು ಮಾಡುವುದು ಅವಶ್ಯಕವಾಗಿರುತ್ತದೆ.

ಸಮಿತಿಯು ಮೆ: ಬದ್ರಿ, ಮಧುಸೂದನ್ ಮತ್ತು ಶ್ರೀನಿವಾಸನ್, ಚಾರ್ಟರ್ಡ್ ಅಕೌಂಟೆಂಟ್ಸ್ ರವರು ಸಲ್ಲಿಸಿರುವ ವರದಿಯನ್ನಾಧರಿಸಿ, ಅದರಲ್ಲಿರುವ ಅಂಶಗಳನ್ನು ಅನುಷ್ಠಾನಕ್ಕೆ ತರಲು ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿರುತ್ತದೆ.

- ಪಾಲಿಕೆಯ ಲೆಕ್ಕಪತ್ರ ನಿರ್ವಹಣೆಗೆ ಅನುಸರಿಸಬೇಕಾದ ಪರಿಷ್ಕೃತ ಮಾರ್ಗಸೂಚಿ ತಯಾರಿಸುವುದು.
- ಕೇಂದ್ರೀಕೃತ ಲೆಕ್ಕಪತ್ರ ನಿರ್ವಹಣೆ ಕೋಶಕ್ಕೆ (Central Accounting Cell) ಅವಶ್ಯಕವಾದಂತಹ ಮೂಲಭೂತ ಸೌಕರ್ಯಗಳ ಬಗ್ಗೆ ವರದಿ (Manpower & I.T. infrastructure)
- ಹಣಕಾಸು ಲೆಕ್ಕಪತ್ರ ಘಟಕ (FAU) Code ಪಟ್ಟಿ ಮತ್ತು Chart of Account Code ವಿವರವಾದ ಪಟ್ಟಿ ತಯಾರಿಸುವುದು.
- ಪಾಲಿಕೆಯಲ್ಲಿ ಹಣಕಾಸು ನಿರ್ವಹಣೆಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತೆಗಳನ್ನು ತೆರೆಯುವ ಮತ್ತು ಮುಕ್ತಾಯಗೊಳಿಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿ ತಯಾರಿಸುವುದು
- ಹಾಲಿಯಿರುವ ಲೆಕ್ಕಪತ್ರ ಪದ್ಧತಿಯಿಂದ ಪರಿಷ್ಕೃತ ಲೆಕ್ಕಪತ್ರ ಪದ್ಧತಿಗೆ ಪರಿವರ್ತನೆ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಯಾರಿಸುವುದು

Nethra Narya

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

* ಹಾಲಿಯಿರುವ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅವಶ್ಯವಿರುವ ಸೂಕ್ತ ಮಾರ್ಪಾಡುಗಳನ್ನು ಮಾಡಿ ವಿವರವಾದ ವರದಿ ತಯಾರಿಸುವುದು.

**ಕೇಂದ್ರೀಕೃತ ಲೆಕ್ಕಪತ್ರ ಕೋಶ ಸ್ಥಾಪನೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೇಂದ್ರೀಕೃತ ಲೆಕ್ಕಪತ್ರ ಕೋಶ ಸ್ಥಾಪನೆ ಮಾಡಿ ಕಾರ್ಯನಿರ್ವಹಿಸಲು ಅನುವಾಗುವಂತೆ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಅವಶ್ಯಕವಾಗಿರುತ್ತದೆ.

ಕೇಂದ್ರೀಕೃತ ಲೆಕ್ಕಪತ್ರ ಕೋಶವನ್ನು ಸ್ಥಾಪಿಸಲು ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಸುಮಾರು 25 ಜನ ಒಟ್ಟಿಗೆ ಕಾರ್ಯನಿರ್ವಹಿಸುವಂತೆ ಸ್ಥಳಾವಕಾಶ ಒದಗಿಸುವುದು.

* ಸದರಿ ಸಿಬ್ಬಂದಿಗಳು ಕಾರ್ಯನಿರ್ವಹಿಸಲು ಅವಶ್ಯಕ ಪೀಠೋಪಕರಣ, ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
* ಸದರಿ ಸಿಬ್ಬಂದಿಗಳು ಕಾರ್ಯನಿರ್ವಹಿಸಲು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳನ್ನು (ಗಣಕಯಂತ್ರ, ಪ್ರಿಂಟರ್, ಅಂತರ್ಜಾಲ ವ್ಯವಸ್ಥೆ) ಒದಗಿಸುವುದು.
* ಸದರಿ ಕೋಶಕ್ಕೆ ಒಂದು ಆಂತರಿಕ ದೂರವಾಣಿ ವ್ಯವಸ್ಥೆ ಕಲ್ಪಿಸುವುದು.

ಸದರಿ ಮಾರ್ಗಸೂಚಿಯಲ್ಲಿ ಕೇಂದ್ರೀಕೃತ ಲೆಕ್ಕಪತ್ರ ವ್ಯವಸ್ಥೆ ನಿರ್ವಹಣೆಗೆ ವೃತ್ತಿಪರ ಸಿಬ್ಬಂದಿಯನು ನಿಯೋಜಿಸಿಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಸಲಹೆಗಾರರಾಗಿ ನುರಿತ ಚಾರ್ಟರ್ಡ್ ಅಕೌಂಟೆಂಟ್ ರವರನು ಪತ್ರಿಕಾ ಪ್ರಕಟಣೆ ನೀಡಿ, ನಿಯೋಜಿಸಿಕೊಳ್ಳಲು ಹಾಗೂ ಇತರೆ ವೃತ್ತಿಪರ ಸಿಬ್ಬಂದಿಗಳನ್ನು ಸಹಾ ಪತ್ರಿಕಾ ಪ್ರಕಟಣೆ ನೀಡಿ ನಿಯೋಜಿಸಿಕೊಳ್ಳುವವರೆವಿಗೂ ಮೆ: ಬದರಿ, ಮಧುಸೂದನ ಮತ್ತು ಶ್ರೀನಿವಾಸನ್, ಚಾರ್ಟರ್ಡ್ ಅಕೌಂಟೆಂಟ್ಸ್ ರವ ಅಧೀನದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಕೆ.ಟಿ.ಪಿ.ಪಿ. ಕಾಯ್ದೆ-1999ರ 4ಜಿ ಅಡಿಯ ಸರ್ಕಾರದಿಂದ ವಿನಾಯಿತಿ ಪಡೆದು, ನಿಯೋಜಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ **"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಲೆಕ್ಕಪತ್ರ ಮಾರ್ಗಸೂಚಿಗಳು-2017"**ಗೆ ಸಂಬಂಧಿಸಿದಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಮಗ್ರ ವರದಿಯನ್ನು ಸಿದ್ದಪಡಿಸಲಾಗಿದ ಅನುಮೋದನೆಗಾಗಿ ಹಾಗೂ ಕೇಂದ್ರೀಕೃತ ಲೆಕ್ಕಪತ್ರ ಕೋಶವನ್ನು ಅಗತ್ಯ ಮೂಲಭೂತ ಸೌಕರ್ಯಗಳು ಮತ್ತು ನುರಿ ಸಿಬ್ಬಂದಿಗಳೊಂದಿಗೆ ಸ್ಥಾಪನೆ ಮಾಡಲು ಅನುಮೋದನೆ ಕೋರಿ ಲೆಕ್ಕಪತ್ರ ಸ್ಥಾಯಿ ಸಮಿತಿ ಮುಂದೆ ಮಂಡಿಸಿರು ಆಯುಕ್ತರ ದಿನಾಂಕ:18-08-2017ರ ಟಿಪ್ಪಣಿ.

**"ಹೆಚ್ಚಿನ ಚರ್ಚೆಗಾಗಿ ಮುಂದೂಡಿದೆ"**

Nethra Narya

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ